### ಆ ಖುಷಿ ಈಗೆಲ್ಲಿ?

‘ಮ್ಯಾರಿ ಹಬ್ಬ’ (ಡಿ. 28, ಮಣ್ಣೆ ರಾಜು) ಮಂದಹಾಸ ಲೇಖನ ಬಹಳ ಚೆನ್ನಾಗಿದೆ. ಈಗ ಮದುವೆ, ಮುಂಜಿ ಮುಂತಾದ ಕಾರ್ಯಕ್ರಮಗಳನ್ನು ಗುತ್ತಿಗೆ ಆಧಾರದಲ್ಲಿ ಆಯೋಜಿಸುವುದು ಟ್ರೆಂಡ್‌ನಂತಾಗಿದೆ. ಯಾರಿಗೂ ಕೆಲಸವಿಲ್ಲದೆ ಸುಮ್ಮನೆ ಕಾರ್ಯಕ್ರಮಕ್ಕೆ ಹಾಜರಾದರೆ ಸಾಕು ಎಂಬ



ಭಾವ. ಬರಿ ಕೈಯಲ್ಲಿ ಬಂದು ಕಾರ್ಯಕ್ರಮ ಮುಗಿಸಿ ಹೋಗುವ ಧಾವಂತ ಕೂಡ ಕಾಣುತ್ತದೆ. ಆದರೆ ಹಿಂದೆ ಈ ಚಿತ್ರಣ ಬೇರೆಯದ್ದೇ ಆಗಿತ್ತು.

ಮನೆಯಲ್ಲಿ ಮದುವೆಯಿದ್ದರೆ ನೆಂಟರು ಎರಡು ದಿನ ಮುಂಚೆ ಬಂದು, ಮದುವೆ ನಂತರವೂ ಎರಡು ದಿನ ಇದ್ದು ಸಹಾಯ ಮಾಡುತ್ತಿದ್ದರು. ಅಕ್ಕಪಕ್ಕದ ಮನೆಯಲ್ಲಿ ಮಲಗುವ ಹಾಗೂ ಸ್ನಾನದ ವ್ಯವಸ್ಥೆ ಮಾಡಲಾಗುತ್ತಿತ್ತು. ಅವರು ಸಹ ಸಂತೋಷದಿಂದಲೇ ಒಪ್ಪುತ್ತಿದ್ದರು. ಹಾಗೇ ಅಡುಗೆ ಮಾಡಲು ನಾಲ್ಕು ಜನ ಬರುತ್ತಿದ್ದರು. ಬಂದ ಜನಕ್ಕೆ ಬಡಿಸಲು ಮನೆಯವರೊಂದಿಗೆ ಹತ್ತಿರದ ಬಂಧುಗಳು ನೆರವಾಗುತ್ತಿದ್ದರು. ಎಲ್ಲವೂ ಸಂತಸದಿಂದ ನೆರವೇರುತ್ತಿದ್ದವು. ಆದರೆ ಆ ಖುಷಿ ಈಗ ಇಲ್ಲ ಅನಿಸುತ್ತಿದೆ.

–ಚಿನಕುರಳಿ ಎಸ್. ಶ್ರೀನಿವಾಸ, ಬೆಂಗಳೂರು

### ಬುದ್ಧಿವಂತಿಕೆ ಮೆಚ್ಚಬೇಕು

‘ಮ್ಯಾರಿ ಹಬ್ಬ’ ತುಂಬಾ ಸೊಗಸಾಗಿದೆ. ಓದಿದ ನಮಗೂ ಅವರ ಆ್ಯನಿವರ್ಸರಿ ಊಟ ಮಾಡಿದಷ್ಟೇ ಖುಷಿ ಆಯಿತು. ಪುಣ್ಯಕ್ಕೆ ಈವೆಂಟ್ ಮ್ಯಾನೇಜ್ಮೆಂಟ್‌ನವರ ಕೈಗೆ ಸಿಕ್ಕಿಕೊಂಡು ದಿವಾಳಿಯಾಗದೇ, ದೇವಸ್ಥಾನಕ್ಕೆ ಹೋಗಿ ಅರ್ಚನೆ ಮಾಡಿಸಿ ಬುದ್ಧಿವಂತರಾದರು.

–ಕೆ.ಎ. ಸೌಮ್ಯ, ಮೈಸೂರು





### ವರ್ಷದ ಸ್ಮೃತಿಪಟಲದಲ್ಲಿ...

‘2023 ಹೂವು ಮುಳ್ಳು; ವಿಕಾಸ–ವಿನಾಶದ ಜುಗಲಬಂದಿ’ ವರ್ಷಾಂತ್ಯ ಸಂಚಿಕೆ ಬಹಳ ವಿಶೇಷವೆನಿಸಿತು. 2023ರ ಬಹುಮುಖ್ಯ ವಿದ್ಯಮಾನಗಳನ್ನು ಕಣ್ಣ ಮುಂದೆ ಇಟ್ಟಿತು. ಹಲವು ನೋವುಗಳಿಗೆ ಈ ವರ್ಷ ಸಾಕ್ಷಿಯಾದರೂ ಸಂತಸದ ಗಳಿಗೆಗಳು ಕೂಡ ಉತ್ಸಾಹ ಇಮ್ಮಡಿಸಿವೆ. ಯುದ್ಧ, ಕೃತಕ ಬುದ್ಧಿಮತ್ತೆ, ಚಂದ್ರಯಾನ 3, ಚೆಸ್ ಆಟದಲ್ಲಿನ ಸಾಧನೆ, ಉತ್ತರಕಾಶಿ ಘಟನೆ, ಅರ್ಜುನ ಆನೆಯ ಸಾವು, ಪರಿಸರ ಜಾಗೃತಿ... ಏನೆಲ್ಲಾ ವಿಷಯಗಳನ್ನು ಒಳಗೊಂಡ ಸಂಚಿಕೆ ನಿಜಕ್ಕೂ ವಿಶೇಷವೆನಿಸಿತು.

–ಸುಮಧುರ ಎಸ್., ಹಾಸನ

### ವಿಕಾಸ- ವಿನಾಶ

‘ವಿಕಾಸ–ವಿನಾಶ’; ಕುವೆಂಪು ಅವರ ‘ಶ್ಮಶಾನ ಕುರುಕ್ಷೇತ್ರ’ದ ಎರಡು ಉಕ್ತಿಗಳು ನೆನಪಾದವು: ‘ವಿಕಾಸಮಾಗುವುದರೊಳೆ ವಿನಾಶಮೈತಂದಪುದು’; ‘ಕಡೆಗಂ ಪೊಲಸಾದುದು!’.

–ಸಿಪಿಕೆ, ಮೈಸೂರು

### ಅಪರೂಪದ ಬರಹ

‘ಡೊನ್ನ ನೂಕ್; ಸೀಲ್‌ಗಳ ಪ್ರಸೂತಿ ಗೃಹ’ (ಡಿ. 28, ಡಾ. ಪ್ರೇಮಲತ ಬಿ.) ಪ್ರವಾಸ ಲೇಖನ ಮಾಹಿತಿಪೂರ್ಣವಾಗಿದೆ. ಸೀಲ್‌ಗಳ ಬಗ್ಗೆ ಅಷ್ಟೇನೂ ತಿಳಿಯದ ಬಹಳಷ್ಟು ಓದುಗರಿಗೆ ಉಪಯುಕ್ತವಾಗಿದೆ. ಅಪರೂಪದ ಲೇಖನವೆನಿಸಿತು. ಇಂತಹ ಜೀವವೈವಿಧ್ಯ ಸಂಗತಿಗಳನ್ನು ಶಾಲಾ ಕಾಲೇಜುಗಳ ಪಠ್ಯಪುಸ್ತಕಗಳಲ್ಲೂ ಅಳವಡಿಸಿದರೆ ಒಳ್ಳೆಯದು.

–ಲಕ್ಷ್ಮಣ್ ರಾವ್ ಎಂ.ಎಲ್., ದಾವಣಗೆರೆ

### ಕುತೂಹಲಕಾರಿ ಸಂಗತಿ

ಇಂಗ್ಲೆಂಡಿನ ಲಿಂಕನ್ ಕೌಂಟಿಯ ಮೇಬಲ್ ತೋರ್ಪ್‌ನಲ್ಲಿನ ಸೀಲ್‌ಗಳ ಕುರಿತ ಬರಹ ಕುತೂಹಲಕಾರಿಯಾಗಿತ್ತು. ಅಪರಿಚಿತ ಲೋಕಕ್ಕೆ ನಮ್ಮನ್ನು ಕರೆದೊಯ್ದಂತಿತ್ತು. ಲೇಖಕರು ಸೀಲ್‌ಗಳ ಜೀವನ ಚಕ್ರವನ್ನು ವೈಜ್ಞಾನಿಕವಾಗಿ ಕಟ್ಟಿಕೊಟ್ಟ ರೀತಿ ಚೆನ್ನಾಗಿದೆ.

–ಶಶಿಧರ ಎಲೆ, ಬೆಂಗಳೂರು





### ಸಂಗೀತದ ಮೌಲಿಕ ಪಾಠಗಳು

‘ಅನ್ನಪೂರ್ಣಾ ದೇವಿಯವರ ಎತ್ತರಕ್ಕೆ ಯಾರೂ ಇರಲಿಲ್ಲ...’ (ಡಿ. 28, ಸುಮಂಗಲಾ) ಅನೌಪಚಾರಿಕ ಮಾತುಕತೆ ಓದಿದೆ. ಖ್ಯಾತ ಸರೋದ್ ವಾದಕ ಉಸ್ತಾದ್ ಆಶೀಷ್ ಖಾನರ ಮೇರು ವ್ಯಕ್ತಿತ್ವ ರೂಪುಗೊಳ್ಳುವ ಹಿಂದೆ ತುಂಬ ಮೌಲಿಕ ಪಾಠಗಳಿವೆ ಎನಿಸಿತು. ಬಾಲಕ ಆಶೀಷ್ ಖಾನ್ ಸಂಗೀತವನ್ನು ಆವಾಹಿಸಿಕೊಂಡು ಬೆಳೆಯುವ ಪ್ರಕ್ರಿಯೆ ಬಹಳ ಮಹತ್ವದ ಶೈಕ್ಷಣಿಕ ತತ್ವಗಳನ್ನು ಒಳಗೊಂಡಿದೆ. ಅನುಕರಣೆ ಮತ್ತು ಸ್ವಸೃಜನಶೀಲತೆಗಳ ನಡುವಿನ ಸಂಬಂಧವನ್ನು ಖಾನರು ಸರಿಯಾಗಿ ತಿಳಿಸಿದ್ದಾರೆ. ಸಂಗೀತಗಾರನ ಮಾತುಕತೆಯ ನಿರೂಪಣೆಯೂ ಸುಂದರವಾಗಿದೆ.

–ಶಿವಾನಂದ ಹೊಂಬಳ

### ಹಲವು ಪ್ರಶ್ನೆಗಳ ‘ಯುದ್ಧ’

‘ಯುದ್ಧದ ಮರುದಿನ’ (ಡಿ. 28, ಜಿ.ವಿ. ಆನಂದಮೂರ್ತಿ) ‘ವಿಚಾರ ಲಹರಿ’ ಬರಹ, ಯುದ್ಧಾನಂತರದ ಭೀಕರತೆಯನ್ನು ವಿಷಾದಿಸುತ್ತದೆ. ಅಲೆಗ್ಸಾಂಡರ್, ಹಿಟ್ಲರರ ರಾಜ್ಯಪಿಪಾಸೆ, ಅನ್ನವಿಟ್ಟವರ ಮನೆಗೆ ಕನ್ನ ಹಾಕಿ ಯುದ್ಧವನ್ನು ಮೇಲೆಳೆದುಕೊಂಡ ಹಮಾಸ್‌ನ ದಡ್ಡತನ, ಇಂತಹ ಮನೋಭಾವಗಳೇ ಇತಿಹಾಸದುದ್ದಕ್ಕೂ ಯುದ್ಧದ ಜ್ವಾಲಾಮುಖಿಯನ್ನು ಸ್ಫೋಟಿಸಿ ಅನಾಥರನ್ನೂ ವಿಧವೆಯರನ್ನೂ ಸೃಷ್ಟಿಸಿವೆ.

ಅಷ್ಟೇಕೆ ಈ ಪ್ರಜಾಪ್ರಭುತ್ವ ಕಾಲದಲ್ಲೂ ಒಂದು ಜನಾಂಗವನ್ನು ಹುರಿದುಂಬಿಸಿ ಇನ್ನೊಂದು ಜನಾಂಗವನ್ನು ಹುರಿದು ಮುಕ್ಕಿ ನೊಂದ ಮಧ್ಯಮ ವರ್ಗದವರನ್ನು ಸೃಷ್ಟಿಸುತ್ತಿಲ್ಲವೆ?

–ಡೀ. ಮುರಳೀಧರ್ ಕುಮಾರ್

### ರುಚಿಗೂ ಆರೋಗ್ಯಕ್ಕೂ ಕಾಡುಬಸಳೆ

‘ಕಾಡುಬಸಳೆ; ಎಲೆಯಿಂದ ಗಿಡ ಹುಟ್ಟಿ’ (ಡಿ. 28, ಯು. ಅನಂತ್) ಲೇಖನ ಓದಿದೆ. ನಮ್ಮ ಕೈತೋಟದಲ್ಲಿಯೂ ಎಲೆ ಬಿದ್ದಲ್ಲೆಲ್ಲ ಚಿಗುರಿ ಬೆಳೆದು ಗುಂಪುಗುಂಪಾಗಿ ಕಾಣುತ್ತದೆ. ನಾನೂ ಉರಿಮೂತ್ರ ಸಮಸ್ಯೆಗೆ ಇದನ್ನು ಬಳಸುತ್ತೇನೆ. ಇದರ ಎಲೆಯಿಂದ ಮಾಡಿದ ಚಟ್ನಿ ಇಡ್ಲಿ–ರೊಟ್ಟಿಗೆ ಒಳ್ಳೆಯ ರುಚಿ.

–ಕೊಹಿಮ ಬಸರಕೋಡು

**ಪ್ರತಿಕ್ರಿಯಿಸಿ** ರಚನಾತ್ಮಕ ಟೀಕೆ–ಟಿಪ್ಪಣಿಗಳಿಗೆ ಸ್ವಾಗತ. ಪ್ರತಿಕ್ರಿಯೆ ಚುಟುಕು, ಚುರುಕಾಗಿರಲಿ. ಇ–ಮೇಲ್: feedback@sudha.co.in